

# ಸತ್ಯಮೇವ ಜಯತೆ

■ ಮಲ್ಲಿಕಾರ್ಜುನ ಸುರಧೇನುಪುರ
ಕಲೆ: ಸಂತೋಷ್ ಸಸಿಹಿತ್ಲು

ಅಕ್ಬರನ ಆಸ್ಥಾನದಲ್ಲಿ ಎಂದಿನಂತೆ ದರ್ಬಾರ್ ನಡೆದಿತ್ತು. ಅಕ್ಬರನ ಮಹಾಮಂತ್ರಿ ಎದ್ದು ನಿಂತು 'ಮಹಾಪ್ರಭು, ಮಂತ್ರಿ ಬೀರಬಲ್ಲನಿಗೆ ನೀವು ನೀಡಿರುವ ಸಲುಗೆ ದುರುಪಯೋಗ ಆಗಿದೆ. ಕೋಶಾಧಿಕಾರಿಯ ಆಯ್ಕೆಯಲ್ಲಿ ಎಡವಟ್ಟು ಮಾಡಿದ್ದಾರೆ. ಬೀರಬಲ್ಲ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಮೂವತ್ತು ಅಂಕಗಳಿಗೆ ಮೂವತ್ತು ಅಂಕ ಪಡೆದ ಪ್ರತಿಭಾವಂತ ಅಭ್ಯರ್ಥಿ ಪರಮಾನಂದರನ್ನು ಕಡೆಗಣಿಸಿದ್ದಾರೆ. ಬದಲಾಗಿ ಇಪ್ಪತ್ತಾರು ಅಂಕ ಪಡೆದ ನಿತ್ಯಾನಂದ ಅವರನ್ನು ಆಯ್ಕೆ ಮಾಡಿದ್ದಾರೆ. ಯಾಕೆ ತಾರತಮ್ಯ ಮಾಡಿದ್ದೀರಿ ಅಂತ ಕೇಳಿದರೆ 'ಪ್ರತಿಭೆ ಇರೋರು ಎಲ್ಲಾದ್ರೂ, ಹೇಗಾದ್ರೂ ಬದುಕು ಕಟ್ಟಿಕೊಳ್ತಾರೆ ಹಾಗಾಗಿ ಸಾಧಾರಣ ವ್ಯಕ್ತಿಯನ್ನು ಕೋಶಾಧಿಕಾರಿಯಾಗಿ ಆಯ್ಕೆ ಮಾಡಿದ್ದೇನೆ' ಅಂತ ವಿತಂಡವಾದ ಬೇರೆ ಮಾಡ್ತಾರೆ. ಅಕ್ಬರನಿಗೆ ಇದರೊಳಗಿನ ಸತ್ಯ ತಿಳಿಯುವ ಬಯಕೆಯಾಯಿತು, ಪರಮಾನಂದ ಮತ್ತು ನಿತ್ಯಾನಂದ ಅವರನ್ನು ಕಾಣುವ ಕುತೂಹಲ ಉಂಟಾಯಿತು.

ಮರುದಿನವೇ ಪರಮಾನಂದ ಮತ್ತು ನಿತ್ಯಾನಂದ ಇಬ್ಬರೂ ಆಸ್ಥಾನಕ್ಕೆ ಬಂದರು. ಇಬ್ಬರೂ ಪರೀಕ್ಷೆಯಲ್ಲಿ ಬರೆದ ಉತ್ತರ ಪತ್ರಿಕೆಗಳನ್ನು ಬಾದಶಾಹ ಅಕ್ಬರ್ ಮುಂದೆ ಮಂತ್ರಿಗಳು ತಂದಿರಿಸಿದರು. ಅಕ್ಬರನಿಗೆ ಬೀರಬಲ್ಲನ ಎಡವಟ್ಟು ನಿಜವೆನಿಸಿತು. ಈಗ ಸಮಜಾಯಿಷಿ ನೀಡುವ ಸರದಿ ಬೀರಬಲ್ಲನದು. ಬೀರಬಲ್ಲನು ಎದ್ದು ನಿಂತು ಸಭೆಗೆ ವಂದಿಸಿ 'ಮಹಾಪ್ರಭು ನಿಮ್ಮ ಕಣ್ಣ ಮುಂದಿರುವುದು ಸತ್ಯ, ಪರಮಾನಂದ ಪರಿವಾರಕ್ಕೆ ನಾಲ್ಕು ಎಕರೆ ನೀರಾವರಿ ಜಮೀನಿದೆ. ಎಂಟು ಎಕರೆ ಖುಷ್ಕಿ ಜಮೀನಿದೆ, ಅವರ ಗ್ರಾಮದಲ್ಲಿ ದಿನಸಿ ಅಂಗಡಿಯಿದೆ. ಹಾಗಾಗಿ ಅವರ ಆಯ್ಕೆಯನ್ನು ಮಾಡಲಿಲ್ಲ. ಕೂಡಲೆ ಎದ್ದು ನಿಂತ ಪರಮಾನಂದ 'ನಮ್ಮ ಬಳಿ ಇರುವುದನ್ನು ನೀವು ಪತ್ತೆ ಹಚ್ಚಿದ್ದೀರಿ ಆದರೆ ನಿತ್ಯಾನಂದರ ಪರಿವಾರದವರ ಬಳಿ ಆರು ಎಕರೆ ನೀರಾವರಿ ಜಮೀನಿದೆ, ಹತ್ತು ಎಕರೆ ಖುಷ್ಕಿ ಜಮೀನಿದೆ ಅವರ ಚಿನ್ನದ ಅಂಗಡಿ ನಗರದಲ್ಲಿದೆ, ಅದನ್ನು ನಾನು ಪತ್ತೆ ಹಚ್ಚಿದ್ದೀನಿ' ಅಂತ ಸಭೆಗೆ ಗಂಟೆ ಹೊಡೆದಂತೆ ಹೇಳಿದ.

ಅಕ್ಬರ್ 'ಬೀರಬಲ್ಲರೆ ಇದಕ್ಕೆ ಏನು ಸಮಜಾಯಿಷಿ ನೀಡುವಿರಿ' ಎಂದ.

ಬೀರಬಲ್ ಎದ್ದು ನಿಂತು 'ಮಹಾಪ್ರಭು, ಹುದ್ದೆಗೆ ಅರ್ಜಿ ಹಾಕುವಾಗ ನಿತ್ಯಾನಂದ ಅವರ ಪರಿವಾರದ ಆಸ್ತಿ ವಿವರಗಳನ್ನು ನಮೂದಿಸಿದ್ದಾರೆ. ಆದರೆ ಪರಮಾನಂದ ಯಾವುದೂ ಇಲ್ಲ ಅಂತ ಬರೆದಿದ್ದಾರೆ. ಈ ಆಧಾರದ ಮೇಲೆ ನಿತ್ಯಾನಂದ ಆಯ್ಕೆ ಆಗಿದೆ. 'ಸತ್ಯಮೇವ ಜಯತೆ' ಅಂತ ಹೇಳಿದ. ಬೀರಬಲ್ಲನ ಜಾಣ್ಮೆಗೆ ಮೆಚ್ಚಿದ ಅಕ್ಬರ್ ಎದ್ದು ನಿಂತು 'ಸತ್ಯಮೇವ' ಎಂದರು. ಸಭಿಕರು 'ಜಯತೆ' ಎಂದರು. ಮತ್ತೆ ಎಲ್ಲರೂ ಮೂರು ಬಾರಿ 'ಸತ್ಯಮೇವ ಜಯತೆ' ಎಂದು ಜಯಘೋಷ ಕೂಗಿದರು. ■